8

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **: 143** |
| 2 | ಸದಸ್ಯರ ಹೆಸರು | : ಶ್ರೀ ಎಸ್.ವಿ.ಸಂಕನೂರ(ಪದವೀದರರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : 14/02/2024 |
| 4 | ಉತ್ತರಿಸುವವರು | : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ | ಗದಗ ಜಿಲ್ಲೆಯ ಶಿರಹಟ್ಟಿ ಪಟ್ಟಣದ ರೇಷ್ಮೆ ಮಾರಾಟ ಕೇಂದ್ರುವು ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಪಟ್ಟಿರುವುದು ನಿಜವೇ: | ರೇಷ್ಮೆ ಬೆಳೆಗಾರರ ಮತ್ತು ನೂಲು ಬಿಚ್ಚಾಣಿಕೆದಾರರ ಅನುಕೂಲಕ್ಕಾಗಿ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆ, ಶಿರಹಟ್ಟಿ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರವು ಇವರಿಗೆ ಅನುಕೂಲ ಕಲ್ಪಿಸುತ್ತಿದೆಯೇ ವಿನಃ ಯಾವುದೇ ನಿರ್ಲಕ್ಷ್ಯತೆಯನ್ನು ವಹಿಸಿರುವುದಿಲ್ಲ. |
| ಆ | ಗದಗ ಜಿಲ್ಲೆಯಲ್ಲಿ ರೇಷ್ಮೆ ಬೆಳೆಗಾರರು ಹೆಚ್ಚುತ್ತಿದ್ದು, ರೈತರ ಉತ್ಪಾದನೆಗಳನ್ನು ಮಾರಾಟ ಮಾಡಲು ರಾಮನಗರಕ್ಕೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಇದಕ್ಕೆ ಕಾರಣವೇನು: | ಉತ್ತರ ಕರ್ನಾಟಕ ಭಾಗದಲ್ಲಿ ಗದಗ ಜಿಲ್ಲೆಯು ರೇಷ್ಮೆ ಅಭಿವೃದ್ಧಿಯಲ್ಲಿ ಮುಂದುವರೆಯುತ್ತಿದೆ. ಪ್ರಸ್ತುತ ಜಿಲ್ಲೆಯಲ್ಲಿ **902** ರೇಷ್ಮೆ ಬೆಳೆಗಾರರು, **720.94** ಹೆಕ್ಟೇರ್ ವಿಸ್ತೀರ್ಣದಲ್ಲಿ ಹಿಪ್ಪುನೇರಳೆ ಬೆಳೆಯುತ್ತಿದ್ದು **315** ಮೆ.ಟನ್ ರೇಷ್ಮೆ ಗೂಡು ಉತ್ಪಾದಿಸುತ್ತಿದ್ದಾರೆ. ಗದಗ ಜಿಲ್ಲೆಯ ಶಿರಹಟ್ಟಿ ರೇಷ್ಮೆ ಗೂಡಿನ ಮಾರುಕಟ್ಟೆಗೆ ಸರಾಸರಿ 200 ರಿಂದ 300 ಕೆ.ಜಿ ಗೂಡಿನ ಆವಕವಿದ್ದು, 6 ರಿಂದ 7 ಜನ ರೇಷ್ಮೆ ನೂಲು ಬಿಚ್ಚಣಿಕೆದಾರರು ಗೂಡು ಖರೀದಿಗಾಗಿ ಭಾಗವಹಿಸುತ್ತಿದ್ದು, ರೇಷ್ಮೆ ಬೆಳೆಗಾರರು ಬೆಳೆದ ದ್ವಿತಳಿ ರೇಷ್ಮೆ ಗೂಡಿಗೆ ರೇಷ್ಮೆ ಗೂಡು ಮಾರುಕಟ್ಟೆ, ಶಿರಹಟ್ಟಿಯಲ್ಲಿ ದೊರೆಯುವ ಧಾರಣೆಗಿಂತ ಸರಾಸರಿ ರೂ.100/-ಗಳ ಹೆಚ್ಚಿನ ಧಾರಣೆ ರಾಮನಗರ ಮಾರುಕಟ್ಟೆಯಲ್ಲಿ ಸಿಗುತ್ತಿರುವುದರಿಂದ ಬೆಳೆಗಾರರು ಸ್ವಯಂ ಪ್ರೇರಿತರಾಗಿ ರಾಮನಗರಕ್ಕೆ ಹೋಗುತ್ತಿದ್ದಾರೆ. ಅಂತಹ ಬೆಳೆಗಾರರಿಗೆ ಸರ್ಕಾರದಿಂದ ಪ್ರತಿ ಕೆ.ಜಿ.ಗೆ ರೂ.10/-ರಂತೆ ಸಾಗಾಣಿಕಾ ವೆಚ್ಚವನ್ನು ನೀಡಲಾಗುತ್ತಿದೆ.<br><br>• ಗದಗ ಜಿಲ್ಲೆಯಲ್ಲಿ ರೇಷ್ಮೆ ನೂಲು ಬಿಚ್ಚುವ ಚಟುವಟಿಕೆಯನ್ನು ಅಭಿವೃದ್ಧಿಪಡಿಸಲು ಶ್ರೀ ಹೇಮಂತ್ ಎನ್. ಸ್ವಾಮಿ, ಪರಿಶಿಷ್ಟ ಫಲಾನುಭವಿಗೆ ಒಂದು ಸ್ವಯಂ ಚಾಲಿತ ನೂಲು ಬಿಚ್ಚಾಣಿಕಾ ಘಟಕ (ARM)ನ್ನು ಶಿರಹಟ್ಟಿ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿಸಲು ಸಹಾಯಧನವನ್ನು ನೀಡಿದ್ದು, ಘಟಕ ಸ್ಥಾಪನೆಯು ಪ್ರಗತಿಯಲ್ಲಿರುತ್ತದೆ.<br>• ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲ್ಲೂಕು ಕೊನಬೇವು ಗ್ರಾಮದಲ್ಲಿ ಹೈ-ಟೆಕ್ ರೇಷ್ಮೆ ಗೂಡು ಮಾರುಕಟ್ಟೆ ನಿರ್ಮಾಣದ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಗದಗ ಜಿಲ್ಲೆಯು ಸೇರಿದಂತೆ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳೂ ಹತ್ತಿರವಿರುವುದರಿಂದ ರೇಷ್ಮೆ ಬೆಳೆಗಾರರು ಸದರಿ ಮಾರುಕಟ್ಟೆಯಲ್ಲೇ ಉತ್ತಮ ಧಾರಣೆಯನ್ನು ಪಡೆಯಬಹುದಾದ್ದರಿಂದ ರಾಮನಗರ ಮಾರುಕಟ್ಟೆಗೆ ಬರುವ ಪ್ರಮೇಯ ಕಡಿಮೆಯಾಗುವುದಾಗಿ ಸರ್ಕಾರವು ನಿರೀಕ್ಷಿಸಿದೆ. |

| | | |
|---|---|---|
| ೩ | ಗದಗ ಜಿಲ್ಲೆಯ ಶಿರಹಟ್ಟಿಯಲ್ಲಿರುವ ರೇಷ್ಮೆ ಮಾರುಕಟ್ಟೆ ಯಾವ ವರ್ಷ ಪ್ರಾರಂಭವಾಗಿದೆ. ಅದರ ಉನ್ನತೀಕರಣಕ್ಕಾಗಿ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ? (ವಿವರ ನೀಡುವುದು.) | ಗದಗ ಜಿಲ್ಲೆಯ ಶಿರಹಟ್ಟಿಯಲ್ಲಿ ರೇಷ್ಮೆ ಗೂಡು ಮಾರುಕಟ್ಟೆಯನ್ನು ಸರ್ಕಾರದ ಅಧಿಸೂಚನೆ ಸಂ:CI 44SLP 90, ದಿನಾಂಕ:14/03/1990 ರಂತೆ ಪ್ರಾರಂಭಿಸಲಾಗಿದೆ.<br><br>ಸದರಿ ಮಾರುಕಟ್ಟೆಯ ಉನ್ನತೀಕರಣಕ್ಕಾಗಿ ಕಾಲಕಾಲಕ್ಕೆ ಸರ್ಕಾರವು ಎಲ್ಲಾ ಅವಶ್ಯಕ ಕ್ರಮಗಳನ್ನು ವಹಿಸುತ್ತಿದೆ. ಪ್ರಸ್ತುತ ಸದರಿ ಮಾರುಕಟ್ಟೆಯಲ್ಲಿ ಇ-ಮಾರುಕಟ್ಟೆ ವ್ಯವಸ್ಥೆ ಅನುಷ್ಠಾನಗೊಳಿಸಲು ಇ- ಇನ್‌ವರ್ಡ್ (ಒಳದಾಖಲು) ವ್ಯವಸ್ಥೆ ಮಾಡಿದ್ದು, ಇ-ಹಣ ಪಾವತಿ ಮಾಡಲು ಮಾರುಕಟ್ಟೆ ಅಧಿಕಾರಿಗಳ ಬ್ಯಾಂಕ್ ಖಾತೆಯನ್ನು ತೆರೆದು ಮುಂದಿನ ಕ್ರಮ ವಹಿಸಲಾಗುತ್ತಿದೆ. ರೇಷ್ಮೆ ಗೂಡಿನ ಮಾರುಕಟ್ಟೆ ಕಟ್ಟಡದ ವಿದ್ಯುತ್ ದುರಸ್ತಿ ಕಾಮಗಾರಿಯನ್ನು 2022-23 ನೇ ಸಾಲಿನಲ್ಲಿ ರೂ.2.00 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ. |

**ಸಂಖ್ಯೆ:ರೇಷ್ಮೆ 65 ರೇಕೃವಿ 2024**

(ಕೆ.ವೆಂಕಟೇಶ)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು